ದಿನಾಂಕ 23-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಕಟ್ಟಿಗೆಯನ್ನು ನೋಡಿ ಸಾಕ್ಷಿದಾರರು ಗುರುತಿಸಿರುತ್ತಾರೆ. ಅದನ್ನು ಮು ಮಾ-1 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರು ಇದ್ದು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ವಾಟೀಸವಾಲು: ಶ್ರೀ ಟಿ.ಎನ್. ವಕೀಲರಿಂದ:-**

1. ನಾನು ದೇವದುರ್ಗ್‌ದಲ್ಲಿ ಮೆಕಾನಿಕ್ ಆಗಿ ಕೆಲಸ ಮಾಡುತ್ತೇನೆ. ನಾನು ಕೊಪ್ಪರದಿಂದ ದೇವದುರ್ಗಕ್ಕೆ ಕೆಲಸಕ್ಕೆ ದಿನಾಲು ಬೆಳಿಗ್ಗೆ ಹೋಗಿ ಸಂಜೆ ಹೋಗಿ ಸಂಜೆ ವಾಪಸ್ಸು ಬರುತ್ತೇನೆ. ದೂರನ್ನು ನೀವು ಬಾಯಿ ಮೂಲಕ ಹೇಳಿ ಕೊಟ್ಟಿದ್ದೀರೋ ಅಥವಾ ಬರವಣಿಗೆಯಲ್ಲಿ ಕೊಟ್ಟಿದ್ದೀರೋ ಎಂದರೆ ಸಾಕ್ಷಿಯು ಪೋಲಿಸ್ ಠಾಣೆಯಲ್ಲಿ ಟೈಪ್ ಮಾಡಿಸಿಕೊಟ್ಟಿರುತ್ತೇನೆ ಎನ್ನುತ್ತಾರೆ. ಪೋಲಿಸರೆ ದೂರನ್ನು ಟೈಪ್ ಮಾಡಿಕೊಟ್ಟಿರುತ್ತಾರೆ ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ದೂರನ್ನು ಟೈಪ್ ಮಾಡಿದ ನಂತರ ಪೋಲಿಸರು ನನಗೆ ಅದನ್ನು ಓದಿ ಹೇಳಿರುತ್ತಾರೆ. ಘಟನೆಯು ದಿನಾಂಕ: 24-10-2023 ರಂದು ಆಗಿರುತ್ತದೆ ನಾನು ದಿನಾಂಕ: 25-10-2023 ರಂದು ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ಪೋಲಿಸ್ ಠಾಣೆಗೆ ಹೋದಾಗ ಸಮಯ ಮಧ್ಯಾಹ್ನ 1-00 ಗಂಟೆಯಾಗಿತ್ತು.

2. ಕೊಪ್ಪರ ದಿಂದ ದೇವದುರ್ಗಕ್ಕೆ ಮುಖ್ಯ ರಸ್ತೆ ಇರುತ್ತದೆ ಎಂದರೆ ಸರಿ. ಆ ರಸ್ತೆಯಲ್ಲಿ ಬಹಳಷ್ಟು ವಾಹನಗಳು ತಿರುಗಾಡುತ್ತವೆಂದರೆ ಸರಿ. ರಾಮನಾಳ ಗ್ರಾಮ ಆದ ಮೇಲೆ ಅರಷಣಿಗಿ ಗ್ರಾಮ ಬರುತ್ತದೆಂದರೆ ಸರಿ. ಸದರಿ ರಸ್ತೆಯಲ್ಲಿ ಮುಂದೆ ನೀರಿನ ಟ್ಯಾಂಕ ಇರುತ್ತದೆ ಆ ರಸ್ತೆಯಲ್ಲಿ ಅರಷಿಣಿಗಿಗಿ ಮತ್ತು ರಾಮನಾಲಕ್ಕೆ ಹೋಗಬಹುದು ಎಂದರೆ ಸರಿ. ಜಗಳವು ರೋಡಿನ ಮಧ್ಯದಲ್ಲಿ ಆಗಿರುತ್ತದೆ. ರೋಡಿನ ಎರಡು ಬದಿಯಲ್ಲಿ ಖುಲ್ಲಾ ಜಾಗ ಇರುತ್ತದೆ ಎಂದರೆ ಸರಿ. ಜಗಳವು ಎಡಗಡೆ ಭಾಗದಲ್ಲಿ ಆಗಿರುತ್ತದೆ. ಅಲ್ಲಿ ಸುತ್ತ ಮುತ್ತ ಹೊಲಗಳು ಇವೆ ಎಂದರೆ ಸರಿ. ಆ ಹೊಲಗಳ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ.

3. ನನ್ನ ಮೋಟಾರ್ ಸೈಕಲ್ ನಂಬರ್ ನನಗೆ ಗೊತ್ತಿಲ್ಲ. ಆ ಮೋಟಾರ್ ಸೈಕಲ್ ಆನಂದ ಎಂಬುವವರ ಹೆಸರಿನಲ್ಲಿರುತ್ತದೆ. ಮೋಟಾರ್ ಸೈಕಲ್ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಜಗಳ ಆಗುವುದಕ್ಕೆ ಕಾರಣ ಏನೂ ನನಗೆ ಗೊತ್ತಿಲ್ಲ. ಆರೋಪಿತನ ಹೊಲದಲ್ಲಿ ಆತನ ಜೋಪಡಿ ಮನೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಹೊಲದಲ್ಲಿ ನಾಯಿ ಮಲಗಿಕೊಂಡಿತ್ತು ಆ ನಾಯಿ ಮೇಲೆ ನೀವು ಮೋಟಾರ್ ಸೈಕಲ್ ಹಾಯಿಸಿದ್ದೀರಿ ಎಂದರೆ ಸರಿಯಲ್ಲ. ಇದನ್ನು ನೋಡಿದ ಆರೋಪಿತನು ಮೊದಲು ನಿನಗೆ ಬುದ್ಧಿ ಮಾತನ್ನು ಹೇಳಿರುತ್ತಾನೆಂದರೆ ಸರಿಯಲ್ಲ. ಘಟನೆಯಾಗುವುದಕ್ಕಿಂತ ಮೊದಲು ಕೊಪ್ಪರ ಮತ್ತು ರಾಮನಾಳ ಗ್ರಾಮದವರ ನಡುವೆ ಜಗಳ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ.

4. ಮು ಮಾ 1 ಯಾವ ಜಾತಿಯದು ಕಟ್ಟಿಗೆ ಇರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಹೊರ ರೋಗಿಯಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ದೂರು ಕೊಟ್ಟ ನಂತರ ಪೋಲಿಸರು ರಾಮನಾಳದ ನೀರಿನ ಟ್ಯಾಂಕ್ ನ ಹತ್ತಿರ ನನ್ನನ್ನು ವಿಚಾರ ಮಾಡಿರುತ್ತಾರೆ. ಘಟನಾ ಸ್ಥಳದ ಚಕ್‌ಬಂದಿ ನನಗೆ ಹೇಳಲು ಬರುವುದಿಲ್ಲ. ಪಂಚನಾಮೆ ಮಾಡಿದಾಗ ನಾನು ಅದಕ್ಕೆ ಸಹಿ ಮಾಡಿದ್ದೇನೆ. ಪಂಚನಾಮೆ ಬರೆದ ಮೇಲೆ ಪೋಲಿಸರು ಓದಿ ಹೇಳಿದ್ದಾರೆಯೇ ಎಂದರೆ ನನಗೆ ನೆನಪಿಲ್ಲ. ದಿನಾಂಕ: 24-10-2023 ರಂದು ಮಧ್ಯಾಹ್ನ 2-30 ಗಂಟೆಗೆ ಆರೋಪಿತನು ರಾಮನಾಳ ವಾಟರ್ ಟ್ಯಾಂಕ್ ಹತ್ತಿರ ರಸ್ತೆಯಲ್ಲಿ ಕಟ್ಟಿಗೆಯಿಂದ ಹಲ್ಲೆ ಮಾಡಿರುತ್ತಾನೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅವಾಚ್ಯ ಶಬ್ದಗಳಿಂದ ಬೈದು ಜೀವದ ಬೆದರಿಕೆ ಹಾಕಿರುತ್ತಾನೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅಕ್ರಮವಾಗಿ ತಡೆದು ನಿಲ್ಲಿಸಿದ್ದಾನೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ದೂರು ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಮು ಮಾ 1 ರಂತೆ ಇರುವ ಕಟ್ಟಿಗೆ ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸಿಗಬಹುದು. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ

ದಿನಾಂಕ 23-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಕಟ್ಟಿಗೆಯನ್ನು ನೋಡಿ ಸಾಕ್ಷಿದಾರರು ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಮು ಮಾ-1 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರು ಇದ್ದು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀಸವಾಲು: ಶ್ರೀ ಟಿ.ಎನ್. ವಕೀಲರಿಂದ:-**

1. ಚಾಸಾ-1 ನಮ್ಮೂರಿನವನಾಗಿರುತ್ತಾನೆ. ಘಟನೆಯಾದಾಗ ನಾನು ರಾಮನಾಳ ನೀರಿನ ಟ್ಯಾಂಕ್ ಹತ್ತಿರ ಇದ್ದೇನು. ಆಗ ಸಮಯ ಮಧ್ಯಾಹ್ನ 2-30 ಗಂಟೆಯಾಗಿತ್ತು. ಪೋಲಿಸರು ಸ್ಥಳಕ್ಕೆ ಬಂದಾಗ ನಾನು ಇರಲಿಲ್ಲ. ಆ ಸಮಯದಲ್ಲಿ ನಾನು ದೇವದುರ್ಗದಿಂದ ಕೊಪ್ಪರಕ್ಕೆ ನನ್ನ ಮೋಟಾರ್ ಸೈಕಲ್ ನಂಬರ್ ಕೆ ಎ 36, 2398 ನೇದ್ದರ ಮೇಲೆ ಹೊರಟಿದ್ದೇನು. ನನ್ನ ಹೇಳಿಕೆಯಲ್ಲಿ ನನ್ನ ಗಾಡಿ ನಂಬರ್ ಹೇಳಿ ಬರೆಸಿಲ್ಲ. ರಾಮನಾಳ ನೀರಿನ ಟ್ಯಾಂಕ್ ಯಾವ ಸರ್ವೆ ನಂಬರ್ ನಲ್ಲಿದೆ ಎಂದು ನನಗೆ ಗೊತ್ತಿಲ್ಲ. ಈ ಘಟನೆಗೂ ಮೊದಲು ಕೊಪ್ಪರ ಗ್ರಾಮದವರಿಗೂ ಮತ್ತು ರಾಮನಾಳ ಗ್ರಾಮದವರಿಗೂ ಗಣೇಶ್ ಹಬ್ಬದ ವಿಚಾರಕ್ಕೆ ಜಗಳ ಆಗಿತ್ತು ಎಂದರೆ ಸರಿ. ಆ ಜಗಳದ ಸಂಬಂಧ ಊರಿನ ಜನರು ಕುಳಿತು ರಾಜಿ ಮಾಡಿಸಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ.

2. ಕೊಪ್ಪರ ದಿಂದ ದೇವದುರ್ಗಕ್ಕೆ ಮುಖ್ಯ ರಸ್ತೆ ಇರುತ್ತದೆ ಎಂದರೆ ಸರಿ. ಆ ರಸ್ತೆಯಲ್ಲಿ ಬಹಳಷ್ಟು ವಾಹನಗಳು ತಿರುಗಾಡುತ್ತವೆಂದರೆ ಸರಿ. ರಾಮನಾಳ ಗ್ರಾಮದಲ್ಲಿ ಆರೋಪಿತನ ಹೊಲದಲ್ಲಿ ಆತನ ಜೋಪಡಿ ಮನೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಹೊಲದಲ್ಲಿ ನಾಯಿ ಮಲಗಿಕೊಂಡಿತ್ತು ಆ ನಾಯಿ ಮೇಲೆ ಚಾಸಾ-1 ರವರು ಮೋಟಾರ್ ಸೈಕಲ್ ಹಾಯಿಸಿದ್ದರು ಎಂದರೆ ಸರಿಯಲ್ಲ. ಇದನ್ನು ನೋಡಿದ ಆರೋಪಿತನು ಮೊದಲು ಆತನಿಗೆ ಬುದ್ದಿ ಮಾತನ್ನು ಹೇಳಿರುತ್ತಾನೆಂದರೆ ಸರಿಯಲ್ಲ. ಜಗಳ

ನಡೆಯುವ ಕಾಲಕ್ಕೆ ನಾನು ಅಲ್ಲಿರಲಿಲ್ಲ ಜಗಳ ಆದ ಮೇಲೆ ಅಲ್ಲಿಗೆ ಹೋಗಿರುತ್ತೇನೆ. ಯಾವ ವಿಚಾರಕ್ಕೆ ಜಗಳ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

3. ದಿನಾಂಕ: 24-10-2023 ರಂದು ಮಧ್ಯಾಹ್ನ 2-30 ಗಂಟೆಗೆ ಆರೋಪಿತನು ರಾಮನಾಳ ವಾಟರ್ ಟ್ಯಾಂಕ್ ಹತ್ತಿರ ರಸ್ತೆಯಲ್ಲಿ ಕಟ್ಟಿಗೆಯಿಂದ ಹಲ್ಲೆ ಮಾಡಿರುತ್ತಾನೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅವಾಚ್ಯ ಶಬ್ದಗಳಿಂದ ಬೈದು ಜೀವದ ಬೆದರಿಕೆ ಹಾಕಿರುತ್ತಾನೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅಕ್ರಮವಾಗಿ ತಡೆದು ನಿಲ್ಲಿಸಿದ್ದಾನೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಮು ಮಾ 1 ರಂತೆ ಇರುವ ಕಟ್ಟಿಗೆ ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸಿಗಬಹುದು. ಚಾಸಾ-1 ನಿಮಗೆ ಖಾಸ ತಮ್ಮನಾಗಬೇಕು ಅವರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-
ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ